ವಾಗಿ ಕೈಗೊಳ್ಳಲು ಉದ್ದೇಶಿಸಿದ್ದು, ದೇವರಾಯ ಅಣೆಕಟ್ಟೆ ಮತ್ತು ನಾಲೆಗಳ ಆಧುನೀಕರಣಕ್ಕೆ ಸಂಬಂಧಿಸಿದಂತೆ 2010–11ನೇ ಸಾಲಿನಲ್ಲಿ ಸರ್ವೇಕ್ಷಣೆ ಮಾಡಲಾಗಿದ್ದು, ಡಿ.ಪಿ.ಆರ್. ಅನ್ನು ತಯಾರಿಸಲಾಗುತ್ತಿದೆ. ಚಿಕ್ಕದೇವರಾಯ ಸಾಗರ ಮತ್ತು ವಿರಿಜಾ ಅಣೆಕಟ್ಟೆ ನಾಲೆಗಳ ಆಧುನೀಕರಣದ ಸರ್ವೆ ಕಾರ್ಯ ಪ್ರಗತಿಯಲ್ಲಿದೆ.

ಇ) 2010–11 ನೇ ಸಾಲಿನಲ್ಲಿ ವಿರಿಜಾ ಮತ್ತು ಚಿಕ್ಕದೇವರಾಯ ಸಾಗರ ಅಣೆಕಟ್ಟೆ ನಾಲೆಗಳ ಆಧುನೀಕರಣಕ್ಕೆ ಸಂಬಂಧಿಸಿದ ಸರ್ವೆ ಕಾರ್ಯ, ಡಿಪಿಆರ್ ತಯಾರಿಕೆ ಹಾಗೂ ಪ್ರಾರಂಭಿಕ ಕೆಲಸಗಳನ್ನು ಕೈಗೊಳ್ಳಲು ತಲಾ ರೂ.1.25 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದೆ. ಡಿಪಿಆರ್ ತಯಾರಿಕೆ ನಂತರ ತಾಂತ್ರಿಕ ಉಪಸಮಿತಿ ಹಾಗೂ ಕಾವೇರಿ ನೀರಾವರಿ ನಿಗಮದ ಮಂಡಳಿಯ ಅನುಮತಿ ಪಡೆದ ನಂತರ ದೊರಕಬಹುದಾದ ಅನುದಾನದ ಮಿತಿಯಲ್ಲಿ ಈಗಾಗಲೇ ಕೈಗೊಂಡಿರುವ ಆಧುನೀಕರಣ ಕಾಮಗಾರಿಗಳಿಗೆ ಆದ್ಯತೆ ನೀಡಿ ಎರಡು ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ 2010–11ನೇ ಸಾಲಿನ ನೀರಾವರಿ ಯೋಜನೆಯ ವಿವರದ ಬಗ್ಗೆ

2(54): ಶ್ರೀ ಮುನಿಯಪ್ಪ ವಿ.(ಶಿಡ್ಲಘಟ್ಟ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 2010–11 ನೇ ಸಾಲಿಗೆ ಭಾರಿ ನೀರಾವರಿ ಯೋಜನೆಗಳಿಗೆ ಆಯವ್ಯಯದಲ್ಲಿ ನಿಗದಿ ಮಾಡಿರುವ ಹಣ ಎಷ್ಟು? ನೀರಾವರಿ ಯೋಜನೆಗಳ ವೆಚ್ಚದ ಹಾಗೂ ಪ್ರಾಜೆಕ್ಟ್ "ವಿವರ ನೀಡುವುದು?

ಆ) ಡಾ: ಪರಮಶಿವಯ್ಯನವರ ವರದಿ ಅನುಸರಿಸಿ ಎಸ್.ಎಸ್.ಆರ್.ಎ. ಸಂಸ್ಥೆ ನಡೆಸುತ್ತಿರುವ ಸಮೀಕ್ಷೆಯ ಪೂರ್ಣ ಪ್ರಗತಿಯ ವಿವರವಾದ ವರದಿ ಪ್ರತಿ ನೀಡುವುದು:

ಇ) ಇಲ್ಲಿಯವರೆವಿಗೂ ಈ ಸಮೀಕ್ಷೆಗೆಂದು ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಬಸವರಾಜ ಬೊಮ್ಮಾಯಿ. (ಜಲಸಂಪನ್ಮೂಲ ಸಚಿವರು):

ಅ) 2010–11 ನೇ ಸಾಲಿಗೆ ಭಾರಿ ನೀರಾವರಿ ಯೋಜನೆಗಳಿಗೆ ಮತ್ತು ಕಾಡಾ ಸೇರಿದಂತೆ ಆಯವ್ಯಯದಲ್ಲಿ ನಿಗದಿ ಮಾಡಿರುವ ಒಟ್ಟು ಹಣ ರೂ.4256.57 ಕೋಟಿಗಳು. ಯೋಜನಾವಾರು ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವರದಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಇ) ಈವರೆಗೆ ಮೆ:ಎನ್‌ಆರ್‌ಎಸ್‌ಸಿ ಸಂಸ್ಥೆ ಹೈದ್ರಾಬಾದ್ ಇವರು ಕೈಗೊಂಡಿರುವ ಸಮೀಕ್ಷಾ ಕಾರ್ಯಕ್ಕೆ ಅನುಗುಣವಾಗಿ ರೂ.643.79 ಲಕ್ಷಗಳನ್ನು ಸದರಿ ಸಂಸ್ಥೆಗೆ ಪಾವತಿಸಲಾಗಿದೆ.

ಶ್ರೀ ಜಿ.ಎಸ್.ಪರಮಶಿವಯ್ಯನವರ ವರದಿ ಆಧರಿಸಿ ಮೆ:ಎನ್.ಆರ್. ಎಸ್.ಸಿ. ಸಂಸ್ಥೆಯಿಂದ ಕೈಗೊಳ್ಳಲಾಗಿರುವ ಸಮೀಕ್ಷೆಯ ಪ್ರಗತಿ ವಿವರ

ಶ್ರೀ ಜಿ.ಎಸ್.ಪರಮಶಿವಯ್ಯನವರು ರೂಪಿಸಿರುವ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಹೆಚ್ಚುವರಿ ನೀರನ್ನು ಪೂರ್ವದ ಬರಪೀಡಿತ ಬಯಲುಸೀಮೆ ಪ್ರದೇಶಕ್ಕೆ ಹರಿಸುವ ಯೋಜನೆಯ ಮಾಲಾ ಕಾಲುವೆಯ ಸರ್ವೆ, ಸೇವಾ ಕಾಲುವೆಯ ಸರ್ವೆ ಮತ್ತು ವಿವರವಾದ ಯೋಜನಾ ವರದಿಯ ತಯಾರಿಕಾ ಕಾರ್ಯವನ್ನು ಮೆ:ಎನ್.ಆರ್.ಎಸ್.ಸಿ. ಸಂಸ್ಥೆಯವರಿಗೆ ನಿರ್ವಹಿಸಲು ದಿನಾಂಕ: 12–09–2003 ರಂದು ಒಡಂಬಡಿಕೆ ಮೂಲಕ ವಹಿಸಲಾಯಿತು. ಇದರ ಪರಿಷ್ಕೃತ ಅಂದಾಜು ರೂ. 14.25 ಕೋಟಿಗಳಾಗಿರುತ್ತದೆ. ಈ ಒಡಂಬಡಿಕೆಯ ಅನ್ವಯ ಮೆ: ಎನ್.ಆರ್. ಎಸ್.ಸಿ ಸಂಸ್ಥೆಯವರು ಇಲ್ಲಿಯವರೆಗೆ ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆಯನ್ನು ಕೈಗೊಂಡು ಮಾಹಿತಿ ಸಲ್ಲಿಸಿರುತ್ತಾರೆ ಹಾಗೂ ಇದಕ್ಕೆ ಬೇಕಾದ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳನ್ನು ಸರಬರಾಜು ಮಾಡಿರುತ್ತಾರೆ. ಇಲ್ಲಿಯವರೆಗೆ ಸದರಿ ಸಂಸ್ಥೆಯು ನಿರ್ವಹಿಸಿರುವ ಕಾಮಗಾರಿಗಳಿಗೆ ಅನುಗುಣವಾಗಿ ರೂ.643.79 ಲಕ್ಷಗಳನ್ನು ಜ.ಸಂ.ಅ. ಸಂಸ್ಥೆಯ ವತಿಯಿಂದ ಮೆ:ಎನ್.ಆರ್.ಎಸ್.ಸಿ.ಸಂಸ್ಥೆಗೆ ಪಾವತಿಸಲಾಗಿದೆ.

ಮೆ:ಎನ್.ಆರ್.ಎಸ್.ಸಿ. ಸಂಸ್ಥೆಯು ALTM (Airborne Laser Terrain Mapping) ಹಾಗೂ Satellite ಸರ್ವೆ ಮಾಡುವ ಸಂಸ್ಥೆಯಾಗಿರುತ್ತದೆ. ಸದರಿ ಯೋಜನೆಯ ಮಾಲಾ ಕಾಲುವೆಗಳು ಪಶ್ಚಿಮ ಘಟ್ಟಗಳ ಇಳಿಜಾರಿನಲ್ಲಿ ಹಾದು ಹೋಗುವುದರಿಂದ, ಸಾಂಪ್ರದಾಯಿಕವಾಗಿ

ನಡೆಸುವ ಸಮೀಕ್ಷೆಯನ್ನು ಕೈಗೊಳ್ಳುವುದು ಕಠಿಣವಾದುದರಿಂದ ಈ ಕಾರ್ಯವನ್ನು ALTM ಮುಖಾಂತರ ಕೈಗೆತ್ತಿಕೊಳ್ಳಲು ಮೆ:ಎನ್.ಆರ್. ಎಸ್.ಸಿ.ಸಂಸ್ಥೆಗೆ ವಹಿಸಿಕೊಡಲಾಗಿತ್ತು.

ಮೆ:ಎನ್.ಆರ್.ಎಸ್.ಸಿ. ಸಂಸ್ಥೆಯವರು ಸರಣಿ ಕಾಲುವೆಗಳ (Garland Canal) ವೈಮಾನಿಕ ಸಮೀಕ್ಷೆಯನ್ನು ಕೈಗೊಂಡು : 28.6.2010 ಹಾಗೂ ದಿ:16.07.2010 ರಂದು 5.00 ಮೀ Counter Interval ಇರುವ ನಕ್ಷೆಗಳ 1.00 ಮೀ Counter Interval ಇರುವ ನಕ್ಷೆಗಳ ಸಾಫ್ಟ್ ಮತ್ತು ಹಾರ್ಡ್ ಪ್ರತಿಗಳನ್ನು ಒದಗಿಸಿರುತ್ತಾರೆ.

ಬಾಕಿ ಉಳಿದಂತೆ ಸೇವಾ ಕಾಲುವೆಯ ಸರ್ವೆ ಕಾರ್ಯವನ್ನು ಮೆ:ಎನ್.ಆರ್.ಎಸ್.ಸಿ.ಸಂಸ್ಥೆಯು ಕೈಗೊಂಡು, ವಿವರವಾದ ಯೋಜನಾ ವರದಿಯ ತಯಾರಿಕೆಯನ್ನು ಮೆ:ಇ.ಪಿ.ಐ.ಎಲ್ ಸಂಸ್ಥೆಗೆ ವಹಿಸಿರುತ್ತದೆ. ಆದರೆ, ಮೆ:ಎನ್.ಆರ್.ಎಸ್.ಸಿ. ಸಂಸ್ಥೆಯು ಈ ಬಾಕಿ ಇರುವ ಕಾಮಗಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ, ಬಾಕಿ ಇರುವ ಕಾಮಗಾರಿಯನ್ನು ಸಿವಿಲ್ ಸರ್ವೆ ಹಾಗೂ ವಿವರವಾದ ಯೋಜನಾ ವರದಿಯ ತಯಾರಿಕೆಯ ಪರಿಣಿತಿ ಹೊಂದಿರುವ ಬೇರೆ ಸಂಸ್ಥೆಯಿಂದ ಟೆಂಡರ್ ಮೂಲಕ ನಿರ್ವಹಿಸಲು ತೀರ್ಮಾನಿಸಲಾಗಿದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಮೆ:ಎನ್.ಆರ್.ಎಸ್.ಸಿ. ಸಂಸ್ಥೆಯು ಸಲ್ಲಿಸಿರುವ ಮಾಹಿತಿಗಳನ್ನು ಆಧರಿಸಿ ಮೊದಲಿಗೆ Concept Report ಸಿದ್ಧಪಡಿಸಲಾಗಿದ್ದು, ಇದು ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

ಸಿ.ಶ್ರೀನಿವಾಸಲು
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ
ಕರ್ನಾಟಕ ಸರ್ಕಾರ ಸಚಿವಾಲಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 54 ಕ್ಕೆ ಅನುಬಂಧ

(ರೂ.ಕೋಟಿಗಳಲ್ಲಿ)

ಕ್ರ ಸಂ . ಅ)	ಯೋಜನೆಗಳ ಹೆಸರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ	2010–11ನೇ ಸಾಲಿನ ಅನುದಾನ	ನವೆಂಬರ್ ಅಂತ್ಯದ ವರೆಗೆ ಪ್ರಗತಿ	ಷರಾ
1.	ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ1		21.82	
2.	ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ2		112.98	
3.	ತೆಗ್ಗಿ ಸಿದ್ದಾಪುರ		3.07	
4.	ಸೊನ್ನ ಏ.ನೀ		0.43	
5.	ರೊಳ್ಳಿ ಮಣ್ಣೇಕರೆ ಏ. ನೀ.		0.00	
6.	ಚಿಮ್ಮಲಗಿ ಏ. ನೀ.		4.20	
7.	ಬಿಜಾಪುರ ಮತ್ತು ಬಾಗಲಕೋಟೆ			
	ಜಿಲ್ಲೆಯ ಕೆರೆಗಳು ತುಂಬಿಸುವುದು		14.37	
8.	ಸೋಂತಿ ಆಧುನೀಕರಣ		8.91	
9.	ಮಂಜ್ರಾ ಬ್ಯಾರೇಜು	533.51	10.28	
10.	ಗೂಗಲ್ ಬ್ಯಾರೇಜು		4.97	
11.	ಮಲ್ಲಾಬಾದ್ ಏ ನೀ		0.00	
12.	ರಾಜನಕೊಳ್ಳೂರು ಏ ನೀ ಯೋ		2.81	
13.	ಬೋನಾಳ್ ಏ ನೀ		2.54	
14.	ನಾರಾಯಣಪುರ ಗೇಟುಗಳನ್ನು			
	ಬಲಪಡಿಸುವುದು		0.54	
15.	ರಾಂತಾಳ್ ಏ ನೀ		10.75	
16.	ತಿಮ್ಮಾಪುರ ಏ ನೀ ಯೋ		4.75	
17.	ರಾಂಪುರ ಏ ನೀ		0.34	
	ಒಟ್ಟು (ಅ)	**535.51**	**202.76**	

ಕ್ರ ಸಂ .	ಯೋಜನೆಗಳ ಹೆಸರು	2010–11ನೇ ಸಾಲಿನ ಅನುದಾನ	ನವೆಂಬರ್ ಅಂತ್ಯದವರೆಗೆ ಪ್ರಗತಿ	ಷರಾ
ಆ)	ಕರ್ನಾಟಕ ನೀರಾವರಿ ನಿಗಮ ನಿಯಮಿತ			
18.	ಘಟಪ್ರಭಾ	112.03	92.80	
19.	ಮಲಪ್ರಭಾ	289.00	61.64	
20.	ಮಾರ್ಕಂಡೇಯ	12.50	1.23	
21.	ಹರಿನಾಲಾ	2.00	0.65	
22.	ತುಂಗಾ ಮೇಲ್ದಂಡೆ ಯೋಜನೆ	131.00	123.49	
23.	ಗಂಡೋರಿನಾಲಾ	9.00	5.88	
24.	ದೂದ್‌ಗಂಗಾ	20.44	5.80	
25.	ವಾರಾಹಿ	112.00	18.0[illegible]	
26.	ಬೆಣ್ಣೆತೋರಾ	13.00	7.0[illegible]	
27.	ಮುಲ್ಲಾಮಾರಿ ಕೆಳದಂಡೆ	20.00	6.98	
28.	ಆಮರ್ಜಾ	23.00	13.17	
29.	ಒಳ್ಳಾರಿನಾಲಾ ಏ ನೀ	15.00	27.06	
30.	ಹಿಪ್ಪರಗಿ	207.00	118.05	
31.	ಸಿಂಗಟಲೂರು	88.00	79.68	
32.	ಭೀಮಾ ಏತನೀರಾವರಿ	102.00	20.84	
33.	ಬಸಾಪುರ ಏತ	3.00	0.25	
34.	ಇಟಗಿ–ಸಾಸಲವಾಡ ಏತ	2.00	1.46	
35.	ಉಬ್ರಾಣಿ–ಅಮೃತಾಪುರ ಏ ನೀ	19.00	11.29	
36.	ಹಿರಣ್ಯಕೇಶಿ ಏ ನೀ	5.00	1.64	
37.	ಬೆಣ್ಣೆ ಹಳ್ಳ ಏ ನೀ	12.00	1.66	
38.	ಕೊಳಚಿ ಏ ನೀ	60.00	11.50	
39.	ಜವಲಹಳ್ಳಿ ಏ ನೀ	0.50	1.01	
40.	ಬೆಣ್ಣೆಹಳ್ಳ ಏ ನೀ	6.00	1.10	
41.	ಕೊಳಚಿ ಏ ನೀ			
42.	ಕೊಣ್ಣೂರು ಏ ನೀ			
43.	ಸನ್ಯಾಸಿಕೊಪ್ಪ ಏ ನೀ	6.00	2.72	
44.	ಉತ್ತರಕನ್ನಡ ಜಿಲ್ಲೆಯ ಕಾಮಗಾರಿಗಳು	0.50	0.31	

45.	ತುಂಗಾ ಏ ನೀ	0.50	0.00	
46.	ಕಳಸನಾಲಾ	12.00	11.89	
47.	ಬಂಡೂರೀ ನಾಲಾ	0.50	0.00	
48.	ಭದ್ರಾ ಮೇಲ್ದಂಡೆ ಯೋಜನೆ ಹಂತ–1	129.83	46.33	
49.	ಭದ್ರಾ ನಾಲೆಗಳ ಆಧುನೀಕರಣ	266.00	109.64	
50.	ಕಿನಾಯೆ	4.00	0.00	
51.	ನಮ್ಮೂರ ಬಾಂದಾರಗಳು	2.00	0.01	
52.	ತಿಳುವಳ್ಳಿ ಏ ನೀ	2.00	0.00	
53.	ದಂಡಾವತಿ	60.00	1.07	
54.	ಶಿಗ್ಗಾಂವ್ ಏ ನೀ	67.00	31.07	
55.	ದಾವಣಗೆರೆ ಜಿಲ್ಲೆಯ 19 ಕೆರೆಗಳು ತುಂಬಿಸುವುದು	20.00	15.56	
56.	ಕಲ್ಲುವಡ್ಡಹಳ್ಳ ಕೆರೆ	3.00	0.00	
57.	ತುಂಗಾಭದ್ರಾ ಯೋಜನೆ	0.00	0.00	
	ನಾಲೆಗಳ ಆಧುನೀಕರಣ			
58.	ಹುಚ್ಚರಾಯನಕೆರೆ	0.00	6.28	
59.	ನಿದಿಗೆ–ಪುರ್ಲೆ	0.50	0.00	
	ಒಟ್ಟು (ಆ)	**1837.33**	**836.20**	

ಕ್ರ ಸಂ.	ಯೋಜನೆಗಳ ಹೆಸರು	2010–11ನೇ ಸಾಲಿನ ಅನುದಾನ	ನವೆಂಬರ್ ಅಂತ್ಯದವರೆಗೆ ಪ್ರಗತಿ	ಪರಾ
ಇ)	**ಕಾವೇರಿ ನೀರಾವರಿ ನಿಗಮ ನಿಯಮಿತ**			
60.	ತಾರಕ	2.12	0.91	
61.	ಹಾರಂಗಿ	14.43	10.06	
62.	ಕಬಿನಿ	80.70	67.90	
63.	ಡಿ.ದೇವರಾಜ ಅರಸು ನಾಲೆ	15.42	14.06	
64.	ಅರ್ಕಾವತಿ	21.95	5.09	
65.	ಮಂಚನಬೆಲೆ	2.36	0.88	
66.	ಇಗ್ಗಲೂರು	3.74	0.83	
67.	ಉಡುತೊರೆಹಳ್ಳ	2.74	0.88	
68.	ಬನಹಳ್ಳಿ ಏತ ನೀರಾವರಿ	1.50	0.75	
69.	ನಂಜಾಪುರ ಏತ	2.92	1.67	

70.	ಕೆ.ಆರ್.ಎಸ್ ಆಧುನೀಕರಣ	10.02	5.61	
71.	ಅಣೆಕಟ್ಟು ನಾಲೆಗಳ ಆಧುನೀಕರಣ	86.50	1.01	
72.	ಪಿಕಪ್‌ಗಳ ನಿರ್ಮಾಣ ಮತ್ತು	2.50	0.96	
	ಸುಧಾರಣೆ			
73.	ಭೈರಾನ ಮತ್ತು ಚಮ್ಮನಹಳ್ಳಿ	1.50	0.26	
	ಪಿಕಪ್‌ಗಳ ಸುಧಾರಣೆ			
74.	ಹನಗುಂದ ಸಾಲು ಕೆರೆಗಳ	0.20	0.26	
	ಆಧುನೀಕರಣ			
75.	ಹುಬ್ಬೇನಹುಣಸೆ ಕೆರೆ ನಿರ್ಮಾಣ	5.00	0.01	
76.	ಡಿ.ದೇವರಾಜ ಅರಸು ನಾಲೆಯ	3.00	5.45	
	ಪುನರ್ ನಿರ್ಮಾಣ			
77.	ಚಿಕ್ಕನಹಳ್ಳಿ ಪಿಕಪ್‌ಗಳ ಸುಧಾರಣೆ	2.00	0.00	
78.	ಕಾವೇರಿಭವನ ಕಟ್ಟಡ ಮಂಡ್ಯ ನಿರ್ಮಾಣ	1.75	0.50	
79.	ಗರ್ಕಳ್ಳಿ ಏ ನೀ	4.24	0.89	
80.	ಕಣ್ವ ಅಣೆಕಟ್ಟುಗಳ ಕ್ರೆಸ್ಟ್ ಗೇಟುಗಳ	1.25	1.42	
	ಜೀರ್ಣೋದ್ಧಾರ ಹಾಗೂ ಪುನರುಜ್ಜೀವನ			
81.	ಕೆ.ಆರ್.ಎಸ್. ಗೇಟುಗಳ ಪುನರುಜ್ಜೀವನ	5.00	2.91	
82.	ಹೇಮಾವತಿ ನಾಲಾ ವಲಯ	72.65	38.09	
83.	ವಾಟೆಹೊಳೆ	1.08	0.41	
84.	ಹೇಮಾವತಿ ಯೋಜನಾ ವಲಯ ಗೊರೂರು	52.67	39.88	
85.	ಯಗಚಿ	57.55	13.98	
86.	ಕಾಮಸಮುದ್ರ	3.10	1.25	
87.	ಹುಚ್ಚನ ಕೊಪ್ಪಲು	5.60	3.62	
88.	ಕಾಚೇನಹಳ್ಳಿ	6.10	1.32	
89.	ಮಳಲೂರು ಏ ನೀ	1.50	0.60	
90.	ಆಂಜನೇಯಪುರ	0.20	0.00	
91.	ಅಣೆಕಟ್ಟು ನಾಲೆಗಳ ಆಧುನೀಕರಣ	55.00	7.60	
92.	ಜೀರ್ಣೋದ್ಧಾರ ಹಾಗೂ	22.00	4.56	
	ಪುನರುಜ್ಜೀವನ			
	ಒಟ್ಟು (ಇ)	**548.29**	**233.09**	
ಈ)	ನಿಗಮೇತರ ವಲಯಗಳು			
93.	ಕಾರಂಜಾ	34.31	4.93	

94.	ಚುಲ್ಕಿ ನಾಲಾ	0.50	0.00	
95.	ತುಂಗಭದ್ರಾ ಎಡದಂಡೆ ಕಾಲುವೆ	3.57	0.04	
96.	ಹಿರೇಹಳ್ಳ	2.03	0.81	
97.	ಕೆಂಚನಗುಡ್ಡ	1.95	0.00	
98.	ವೈ-ಕಗ್ಗಲ್	0.46	0.00	
99.	ಮಸ್ಕಿನಾಲಾ	1.19	0.25	
100.	ನೂತನ ಯೋಜನೆಗಳು	115.32	9.78	
101.	ಹೋಡಿರಾಯನ ಹಳ್ಳದಿಂದ ಜಂಬದಹಳ್ಳ ತಿರುವು ಯೋಜನೆ	1.00	0.00	
102.	ತಿಮ್ಮಾಪುರ ಏ ನೀ.ಯೋ	1.15	0.00	
103.	ಬಕ್ರಿಹಳ್ಳ ಏತ	2.00	0.00	
	ಒಟ್ಟು (ಈ)	**163.48**	**15.81**	
	ಒಟ್ಟು(ಅ)+(ಆ)+(ಇ)+(ಈ)	**3082.61**	**1287.86**	

3(50): ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಕಂದಾಯ ಸಚವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯ ತುಮಕೂರು ನಗರ ವ್ಯಾಪ್ತಿಯಲ್ಲಿ ಉಪ್ಪಾರಹಳ್ಳಿ ಗ್ರಾಮದ ಸ.ನಂ.23/1 ರ 9.00 ಎಕರೆ ಜಮೀನನ್ನು ರಾಜಕೀಯ ದುರುದ್ದೇಶದಿಂದ ಭೂಸ್ವಾಧೀನ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸದರಿ ಪ್ರಸ್ತಾವನೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಸದರಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಯಾವ ಯಾವ ಇಲಾಖೆಗಳು ಜಮೀನಿಗಾಗಿ ಪ್ರಸ್ತಾವನೆ ಸಲ್ಲಿಸಿವೆ. ಈ ಸಂಬಂಧ ಎಷ್ಟು ಮೊತ್ತವನ್ನು ಭೂಸ್ವಾಧೀನಾಧಿಕಾರಿಗಳಿಗೆ ಪಾವತಿಸಲಾಗಿದೆ ಹಾಗೂ ಈ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಸರ್ಕಾರ ಅನುಮತಿ ನೀಡಲಾಗಿದೆಯೇ?

ಈ) ನಗರದ ಮಧ್ಯ ಭಾಗದಲ್ಲಿ ವಸತಿ ಭೂ ಪರಿವರ್ತನೆಯಾಗಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು